ಅ) ರಾಜ್ಯದಲ್ಲಿ ಎಷ್ಟು ಸ್ಥಳಗಳಲ್ಲಿ ಎಪಿಎಮ್ಸಿ ಮಾರ್ಕೆಟ್ಯಾರ್ಡ್ಗಳಲ್ಲಿ ಶ್ರಮಿಕ ಭವನಗಳನ್ನು ಕಟ್ಟಲು ಉದ್ದೇಶಿಸಲಾಗಿದೆ;

ಆ) ಈ ಶ್ರಮಿಕ ಭವನ (ಹಮಾಲರ ಭವನ)ಗಳನ್ನು ಕಟ್ಟಲು ಸರಕಾರದವರು ಕ್ರಮ ಕೈಗೊಂಡಿರುವರೆ.

ಇ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಎಸಿಎಂಸಿ ಮಾರ್ಕೆಟ್ಯಾರ್ಡ್ನಲ್ಲಿ ರೈತಭವನ ಇಲ್ಲದೇ ಇರುವ ವಿಷಯ ಸರಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಹೊಸ ಎಪಿಎಂಸಿ ಮಾರ್ಕೆಟ್ಯಾರ್ಡ್ನಲ್ಲಿ ರೈತಭವನ ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ರಾಮಲಿಂಗರೆಡ್ಡಿ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) 10 ಮಾರುಕಟ್ಟೆ ಪ್ರಾಂಗಣಗಳಲ್ಲಿ ಶ್ರಮಿಕ ಭವನ ಕಟ್ಟಲು ಉದ್ದೇಶಿಸಲಾಗಿದೆ.

ಆ) ಹೌದು.

ಇ) ಮತ್ತು ಈ) ಬೈಲಹೊಂಗಲ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಹಳೆಯ ಪ್ರಾಂಗಣದಲ್ಲಿ ರೈತ ಭವನ ಕಟ್ಟಲಾಗಿದೆ. ಹಾಗೂ ಹೊಸ ಮಾರುಕಟ್ಟೆ ಪ್ರಾಂಗಣದಲ್ಲಿ ಅವಶ್ಯಕತೆಯನ್ನು ಪರಿಗಣಿಸಿ ರೈತಭವನ ಕಟ್ಟಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕ್ಷೇತ್ರ ಸೊಗಲದಲ್ಲಿ ತೋಟಗಾರಿಕೆ ಅಭಿವೃದ್ಧಿ

303 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಶ್ರೀ ಕ್ಷೇತ್ರ ಸೊಗಲದಲ್ಲಿ ತೋಟಗಾರಿಕೆ ಇಲಾಖೆಯಿಂದ ಅಭಿವೃದ್ಧಿ ಹಾಗೂ ಉದ್ಯಾನವನ ನಿರ್ಮಿಸುವ ಬಗ್ಗೆ ಸರ್ಕಾರಕ್ಕೆ ಮನವಿಗಳು ಬಂದಿವೆಯೇ?

ಆ) ಹಾಗಿದ್ದಲ್ಲಿ ಇಲ್ಲಿ ಅಭಿವೃದ್ಧಿ ಹಾಗೂ ಉದ್ಯಾನವನ ಮಾಡುವ ಬಗ್ಗೆ ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು.

ಇ) ಶ್ರೀ ಕ್ಷೇತ್ರ ಸೊಗಲದವರು (ಟ್ರಸ್ಟವರು) ತಮ್ಮ ಮಾಲ್ಕಿಯ ಜಮೀನನ್ನು ತೋಟಗಾರಿಕೆ ಇಲಾಖೆಯವರಿಗೆ ಉದ್ಯಾನವನ ಮಾಡಲು, ಕೊಡಲು ಒಪ್ಪಿದ್ದಲ್ಲಿ ಅದ್ಯತೆ ಮೇರೆಗೆ ಉದ್ಯಾನವನ ಮತ್ತು ಅಭಿವೃದ್ಧಿ ಕಾರ್ಯವನ್ನು ಸರ್ಕಾರದವರು ಕೈಗೊಳ್ಳುವುದೇ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಹೌದು.

ಆ) ಶ್ರೀ ಕ್ಷೇತ್ರ ಸೊಗಲದಲ್ಲಿ ಅಲಂಕಾರಿಕ ತೋಟ ಮಾಡಲು 13.54 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಯೋಜನೆಯನ್ನು ತಯಾರಿಸಿ, ಜಿಲ್ಲಾ ಪರಿಷತ್, ಬೆಳಗಾಂನ್ನು ಅನುದಾನ ಒದಗಿಸಲು ಕೋರಲಾಗಿದೆ. ಇದರಲ್ಲಿ 94Ë95ಕ್ಕೆ ಅಂದಾಜಿಸಿರುವ ಮೊತ್ತ ರೂ. 1.87 ಲಕ್ಷಗಳು.

ಇ) ಪರಿಶೀಲಿಸಲಾಗುವುದು.

ಸಹಕಾರಿ ಸಂಘಗಳಿಗೆ ರೈತರಿಂದ ಬರಬೇಕಾದ ವಾಯಿದೆ ದಾಟಿದ ಸಾಲ.

299 - ಶ್ರೀ ಎ. ರುಕ್ಕಯ್ಯ ಪೂಜಾರಿ (ವಿಟ್ಲ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಕಾರ ಸಂಘಗಳಿಗೆ 1994ನೇ ಜುಲೈ ಅಂತ್ಯದವರೆಗೆ ರೈತರಿಂದ ಬರಬೇಕಾದ ವಾಯಿದೆ ದಾಟಿದ ಸಾಲ ಎಷ್ಟು?